
ಸಾಕು ಎಂದುಕೊಳ್ಳುವಾಗಲೇ, ತಪ್ತಗೊಂಡ ತಮ್ಮ ದೇಹವಾಂಛೆಯನ್ನು ಸಹ ಆ ದಯನೀಯ ಬದುಕಿನಂತೆಯೇ ಅನೈತಿಕವೆಂದು ತಿಳಿದೋ ತಿಳಿಯದೆಯೋ ಮುನ್ನಡೆಸಿಕೊಂಡು ಹೋಗುತ್ತಿರುವ ಅಸಂಖ್ಯ ಹೆಣ್ಣುಮಕ್ಕಳನ್ನು ಮಾದೇವಿ ಪ್ರತಿನಿಧಿಸುತ್ತಾಳೆ. ಇಲ್ಲಿ ಆಕೆಯ ಸುತ್ತ ಎಂದೂ ಕರಗದ ನೋವಿದೆ; ತೀರದ ಹಸಿವಿದೆ ಮತ್ತು ತಣಿಯದ ವಾಂಛೆಯಿದೆ! ಲೋಕನಿಂದನೆಯನ್ನು ಮೀರಿ, ವ್ಯವಸ್ಥೆಯ ಪರಿಧಿಯೊಳಗಿರುವ ಬದುಕಿಗೆ ತಾಕುವಂತೆ ಮುನ್ನಡೆಸಿಕೊಂಡು ಹೋಗಬಹುದಾದ ಛಾತಿಯೂ ಆಕೆಗಿದೆ.

ಮಾದೇವಿಗೆ ತಿಪ್ಪೇಶಿಯಂಥ ಯಡಬಿಡಂಗಿ ಕುಡುಕ ಗಂಡನಿರುವಂತೆಯೇ, ತನ್ನನ್ನು ಇನ್ನಿಲ್ಲದಂಗೆ ದಹಿಸುವಂತೆ ಮಾಡುವುದಕ್ಕಾಗಿ ಮಗ ಮಾದನ ಮೂಲಕ ಏಸುವನ್ನು (ದೇವರು) ಮುಂದಿಟ್ಟುಕೊಂಡು, ಆಕೆಯ ದೇಹದ ಮೇಲೆ ಕಣ್ಣು ಹಾಕಿರುವ ಯಲ್ಲಪ್ಪರೆಡ್ಡಿಯಂಥ ವಿಕ್ಷಿಪ್ತ ಮನಸ್ಸಿನ ವ್ಯಕ್ತಿಯೂ ಇದ್ದಾನೆ. ಆಕೆಯನ್ನು ಸಂಕಟದಿಂದ ಪಾರು ಮಾಡಿ ಮಾನವೀಯತೆ ಮೆರೆದ ಪೊಲೀಸ್ ನಾಗೇಶಪ್ಪನೂ ಇದ್ದಾನೆ. ಆತನಿಗೆ ಮಾದೇವಿ ಒಲಿದಿರುವುದು ಅನೈತಿಕ ಎಂಬ ಮಾತನ್ನು ಮೀರಿ ಮನುಷ್ಯ ಸಂಬಂಧಗಳ ಕುರಿತಾಗಿ ಕಥೆ ಯೋಚಿಸುವಂತೆ ಮಾಡುತ್ತದೆ. ಇವೆಲ್ಲ ಹಳವಂಡಗಳನ್ನು ಒಡಲೊಳಗಿಟ್ಟುಕೊಂಡಿರುವ ಆಕೆಯ ಬದುಕು ಮಾತ್ರ ಎಂಥವರ ಮನಸ್ಸನ್ನೂ ತೇವಗೊಳಿಸುತ್ತದೆ. ಕಥೆಯಲ್ಲಿ ಕೊರೊನಾ ಸಹ ಒಂದು ಪಾತ್ರವಾಗಿ ಮೈದಳೆದಿದೆ. ಮಾದೇವಿಯ ಪ್ರಾರಂಭದಲ್ಲಿನ ಒಂದು ತೆರದ ಬದುಕಿನಲ್ಲಿ ಕೊರೊನಾ ಕಾಣಿಸಿಕೊಂಡ ನಂತರ ಇನ್ನಿಲ್ಲದ ಪಲ್ಲಟಗಳಾಗುತ್ತವೆ. ಮಗ ಮಾದೇಶನನ್ನು ಕಳೆದುಕೊಂಡ ಆಕೆಗೆ ಮಂಜ ಮತ್ತು ಪಾರಿಜಾತ ಹೂ ಹೆಕ್ಕುತ್ತಿದ್ದ ಹುಡುಗಿಯ ವಿಚಾರದಲ್ಲಿ ಅಂತಃಕರಣ ಸೃಜಿಸುವುದಕ್ಕೆ ಕೊರಾನಾ ದೆಸೆಯಿಂದಾಗಿ ಮನುಷ್ಯ ಮನುಷ್ಯರ ನಡುವೆ ಉಂಟಾದ ಅಂತರವೂ ಒಂದು ಕಾರಣವಾಗುತ್ತದೆ. ಕೊನೆಯಲ್ಲಿ ಕೆಲವರದಾದರೂ ಬದುಕು ಹೀಗೂ ಇರುತ್ತದೆ ಎಂಬುದನ್ನು ಕಥೆ ಮನವರಿಕೆ ಮಾಡಿಕೊಡುತ್ತದೆ.

ಆಧುನಿಕ ಬದುಕಿನ ದ್ವಂದ್ವಗಳ ಕಾರಣವಾಗಿ ಮನುಷ್ಯ ಎದುರಿಸುತ್ತಿರುವ ಸಂಕಷ್ಟಗಳ ಸ್ಪಷ್ಟ ಅರಿವು ಕಥೆಗಾರ್ತಿಗಿದೆ. 'ಸ್ಯಾನಿಟರಿ ಪ್ಯಾಡ್' ಕಥೆಯಲ್ಲಿ ಅವರು ಆ ದ್ವಂದ್ವಗಳಿಗೆ ಮುಖಾಮುಖಿಯಾಗುವ ಪ್ರಯತ್ನ ಮಾಡಿದ್ದಾರೆ. ಈ ಕಥೆಯ ಶೀರ್ಷಿಕೆ, ಕಥೆಯ ಮುಖ್ಯಪಾತ್ರ ದಿವಾಕರನ




ಚೋದ್ಯ
ಲೇ: ಅನುಪಮಾ ಪ್ರಸಾದ್
ಪು: 160; ಬೆ: ₹ 185
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು.
ಫೋನ್: 9448696770